ಇ) ಹಾಗಿದ್ದಲ್ಲಿ, ಇದಕ್ಕೆ ಅಧಿಕಾರಿಗಳ ನಿರ್ಲಕ್ಷ್ಯತನ ಕಾರಣವೇ:

ಈ) ಹಾಗಿದ್ದಲ್ಲಿ, ಸರ್ಕಾರವು ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುತ್ತದೆಯೇ:

ಉ) ಸರ್ಕಾರ ಕೂಡಲೇ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದೇ?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಶಿಗ್ಗಾಂವ ವಿಧಾನ ಸಭಾ ಕ್ಷೇತ್ರದ ಜೊಂಡಲಗಟ್ಟಿ (ಸಿ.ಸಿ.ನಂ.81) ಗ್ರಾಮಕ್ಕೆ ಸುಮಾರು 25 ವರ್ಷಗಳ ಹಿಂದೆಯೇ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಆದರೆ ಹಳವೂರು–ತರ್ಲಘಟ್ಟ ಒಂದು ಉಪಗ್ರಾಮವಾಗಿದ್ದು, ಇದು ವಿದ್ಯುದೀಕರಣವಾಗಬೇಕಾಗಿರುತ್ತದೆ.

ಆ) ನವೆಂಬರ್–2001 ರಲ್ಲಿ ಹಳವೂರು–ತರ್ಲಘಟ್ಟ ಉಪ ಗ್ರಾಮದ ವಿದ್ಯುದ್ಧೀಕರಣ ಕಾಮಗಾರಿಯನ್ನು ಗುತ್ತಿಗೆ ಪಡೆದುಕೊಂಡಿದ್ದ ಮೆ: ಮೆಕಾನ್ಸ್ ಸಂಸ್ಥೆ, ಬೆಂಗಳೂರು ಅವರು ಕಾಮಗಾರಿಯನ್ನು ಪೂರ್ಣಗೊಳಿಸಲು ವಿಫಲರಾದ ಕಾರಣ ಈ ಉಪಗ್ರಾಮಕ್ಕೆ ವಿದ್ಯುತ್ ಪೂರೈಸಲು ವಿಳಂಬವಾಗಿರುತ್ತದೆ.

ಇ) ಮತು ಈ) ಕಾಮಗಾರಿಗಳ ಗುತ್ತಿಗೆ ಪಡೆದುಕೊಂಡಿದ್ದ ಗುತ್ತಿಗೆದಾರರು ಕೆಲಸ ನಿರ್ವಹಿಸಲು ವಿಫಲರಾದ್ದರಿಂದ ವಿದ್ಯುದ್ಧೀಕರಣ ಕಾಮಗಾರಿ ವಿಳಂಬವಾಗಿರುತ್ತದೆ. ಇದಕ್ಕೆ ಕೆ.ಪಿ.ಟಿ.ಸಿ.ಎಲ್/ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ಅಧಿಕಾರಿಗಳ ನಿರ್ಲಕ್ಷತನ ಕಾರಣವಾಗಿರುವುದಿಲ್ಲ. ಆದುದರಿಂದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಅವಶ್ಯಕತೆ ಇರುವುದಿಲ್ಲ.

ಉ) ಆರ್.ಇ.ಸಿ. ಯೋಜನೆಯಲ್ಲಿ ಮಂಜೂರಾಗಿರುವ ವಿದ್ಯುದ್ಧೀಕರಣವನ್ನು ಶೀಘ್ರದಲ್ಲಿ ಪೂರ್ಣಗೊಳಿಸಿ, ಹಳವೂರು–ತರ್ಲಘಟ್ಟ ಉಪಗ್ರಾಮಕ್ಕೆ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲಾಗುವುದು.

854(1598) ಶ್ರೀ ಸಿಂಧೂರ ರಾಜಶೇಖರ (ಶಿಗ್ಗಾಂವ್): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಮೂರು ವರ್ಷದಲ್ಲಿ ಶಿಗ್ಗಾಂವ ಮತ ಕ್ಷೇತ್ರದ ಲೋಕೋಪಯೋಗಿ ಇಲಾಖೆಯ ಎಲ್ಲಾ ರಸ್ತೆಗಳು ದುಸ್ಥಿತಿಯಲ್ಲಿದ್ದು, ಅತಿಕ್ರಮಣವಾಗಿ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ರಸ್ತೆಗಳ ಅನುದಾನವನ್ನು ಬಿಡುಗಡೆಗೊಳಿಸಿ ಸುವ್ಯವಸ್ಥಿತಗೊಳಿಸುವ ಕ್ರಮವನ್ನು ಶೀಘ್ರದಲ್ಲಿ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂದನ ಸಚಿವರು) :

ಅ) ಬಂದಿರುತ್ತದೆ.

ಆ) ಮೊದಲಿನ ರಾಜ್ಯ ಹೆದ್ದಾರಿಗಳಾದ ಕಾರವಾರ ಕೈಗಾ ಇಳಕಲ್ ರಾಜ್ಯ ಹೆದ್ದಾರಿ, ಗಂಗಾಮೂಲ ತಡಸ ರಾಜ್ಯ ಹೆದ್ದಾರಿ ಹಾಗೂ ಕುಮಟಾ ಹುಬ್ಬಳ್ಳಿ ರಾಜ್ಯ ಹೆದ್ದಾರಿಗಳ 3 ವರ್ಷಗಳ ನಿರ್ವಹಣಾ ಗುತ್ತಿಗೆಯನ್ನು ಮೆಃ ಎನ್.ಎಸ್.ನಾಯಕ ಮತ್ತು ಸನ್ಸ್ ಇವರಿಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ಇವರ ಮೂಲಕ ಗುತ್ತಿಗೆ ನೀಡಲಾಗಿದ್ದು ಈಗ ಎರಡನೇ ವರ್ಷದ ನಿರ್ವಹಣೆ ಕೆಲಸವು ಮುಕ್ತಾಯ ಹಂತದಲ್ಲಿದೆ.

ಮೇಲ್ದರ್ಜೆಗೇರಿಸಲ್ಪಟ್ಟ ರಾಜ್ಯ ಹೆದ್ದಾರಿಯಾದ ಕಲ್ಲಾಲಾ ಶಿಗ್ಗಾಂವಿ ರಸ್ತೆ (ಶಿಗ್ಗಾಂವಿ ಗುಡಗೇರಿ ರಸ್ತೆ)ಯ ತಗ್ಗು ಗುಂಡಿಗಳನ್ನು ತುಂಬಿ ನಿರ್ವಹಣೆ ಮಾಡಲು 04–05ನೇ ಸಾಲಿನಲ್ಲಿ 3054 ರಸ್ತೆ ಮತ್ತು ಸೇತುವೆಗಳು ಯೋಜನೆ (ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ) ರೂ.4.65 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ದುರಸ್ತಿ ಕಾಮಗಾರಿಯನ್ನು ಗುತ್ತಿಗೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಕೈಗೆತ್ತಿಕೊಳ್ಳಲಾಗುವುದು. ಶಿಗ್ಗಾಂವಿ ಸವಣೂರು ತಾಲ್ಲೂಕಿನ ಎಲ್ಲಾ ಜಿಲ್ಲಾ ಮುಖ್ಯ ರಸ್ತೆಗಳ ಗುಂಡಿ ತುಂಬುವ ಕಾಮಗಾರಿಯನ್ನು ಜನವರಿ 05 ರ ಮೊದಲ ವಾರದಲ್ಲಿಯೇ ಪೂರ್ಣಗೊಳಿಸಲಾಗಿದೆ. ಕಾರವಾರ ಕೈಗಾ ಇಳಕಲ್ ರಾಜ್ಯ ಹೆದ್ದಾರಿ ಹಾಗೂ ಸವಣೂರು ಶೆರೆವಾಡ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಆಗಿರುವ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸುವಂತೆ ಈಗಾಗಲೇ ನೋಟೀಸ್ ನೀಡಲಾಗಿದ್ದು, ಶೀಘ್ರವೇ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಕೈಗೊಳ್ಳಲಾಗುತ್ತಿದೆ.

855(247) ಶ್ರೀ ಸೋಮಣ್ಣ ವಿ. (ಬಿನ್ನಿಪೇಟೆ): ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಕ್ರೀಡಾ ಪ್ರಾಧಿಕಾರದಲ್ಲಿ ಒಟ್ಟು ಇರತಕ್ಕ ಸಿಬ್ಬಂದಿ ಹಾಗೂ ಕೆಲಸ ನಿರ್ವಹಿಸುತ್ತಿರುವ ವಿವಿಧ ಕ್ರೀಡೆಗಳ ತರಬೇತುದಾರರ ಸಂಖ್ಯೆ ಎಷ್ಟು?

ಆ) ಈ ಪ್ರಾಧಿಕಾರದಲ್ಲಿನ ಸಿಬ್ಬಂದಿಗೆ ಹಾಗೂ ತರಬೇತಿದಾರರಿಗೆ ಹೆಚ್ಚಿನ ವೇತನ ನೀಡಲು ಕ್ರಮ ಕೈಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) 2004–05ರಲ್ಲಿ ಈ ಪ್ರಾಧಿಕಾರಕ್ಕೆ ಸರ್ಕಾರ ನೀಡಿರುವ ಅನುದಾನವೆಷ್ಟು ಹಾಗೂ ಈ ಸಾಲಿನಲ್ಲಿ ಕ್ರೀಡಾ ತರಬೇತಿಯ ಸಾಮಗ್ರಿಗಳ ಖರೀದಿಗೆ ಮೀಸಲಿಟ್ಟಿರುವ ಹಣವೆಷ್ಟು;

ಈ) 2004–05ರಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕ್ರೀಡಾ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕಾರ್ಯಕ್ರಮಗಳೇನು (ವಿವರ ನೀಡುವುದು)?

ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ 109 ತರಬೇತಿದಾರರು ಹಾಗೂ 44 ಜನ ಸಿಬ್ಬಂದಿ ಒಟ್ಟು 153 ಜನ ಕಾರ್ಯನಿರ್ವಹಿಸುತ್ತಿದ್ದಾರೆ.

ಆರ್ಚರಿ	–	01	ಜಿಮ್ನಾಸ್ಟಿಕ್ಸ್	–	06
ಅಥ್ಲೆಟಿಕ್ಸ್	–	15	ಹಾಕಿ	–	14
ಬ್ಯಾಡ್ಮಿಂಟನ್	–	01	ಜುಡೋ	–	03
ಬಾಕ್ಸಿಂಗ್	–	03	ಖೋ–ಖೋ	–	06
			ಕಬಡ್ಡಿ	–	05
ಬ್ಯಾಸ್ಕೆಟ್‌ಬಾಲ್	–	10	ಟೆನ್ನಿಸ್	–	01
ಕ್ರಿಕೆಟ್	–	04	ಈಜು	–	04